ಮೂಲ ದಾವಾ ಸಂಖ್ಯೆ. 45/2016 ಡಿ ಡಬ್ಲ್ಯೂ 1

(ದಿನಾಂಕ 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ದಾವಾ ಆಸ್ತಿ ಸರ್ವೆ ನಂ.488/ಇ ಇದರ ಒಟ್ಟು ವಿಸ್ತೀರ್ಣ 13.44 ಎಕರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಉತ್ತರ ದಿಕ್ಕಿನಲ್ಲಿರುವ 4 ಎಕರೆ ಜಮೀನಿನ ಕುರಿತು ಈ ದಾವೆ ನಡೆಯುತ್ತಿದೆ ಎಂದರೆ ಸರಿ. ಸದರಿ 13.44 ಎಕರೆ ಜಮೀನು ಇದು ನಮ್ಮ ಪಿತ್ರಾರ್ಜಿತ ಆಸ್ತಿ. ಚೆನ್ನ ಬಸಮ್ಮ ಇವರು ಸುಮಾರು 50 ವರ್ಷದ ಹಿಂದೆ ತೀರಿಕೊಂಡಿದ್ದಾರೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಚೆನ್ನ ಬಸಮ್ಮ ಇವರು ಸನ್ 1955 ರಿಂದ 60 ರ ಅವದಿಯಲ್ಲಿ ತೀರಿಕೊಂಡಿರಬಹುದು ಎಂದರೆ ಮಾಹಿತಿ ಇಲ್ಲ. ನನ್ನ ತಂದೆಯವರು ಸನ್ 2008 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆಯವರ ತಂದೆ ವಿರೂಪಾಕ್ಷಪ್ಪ ಇವರು ಸನ್ 1980 ಅಥವಾ 1985 ರಲ್ಲಿ ತೀರಿಕೊಂಡಿರಬಹುದು. ಅವರ ಮರಣದ ದಿನಾಂಕದ ಬಗ್ಗೆಯೂ ನನಗೆ ಸರಿಯಾಗಿ ಮಾಹಿತಿ ಇಲ್ಲ ಆ ಸಮಯದಲ್ಲಿ ನಾನು ಇನ್ನೂ ಹುಟ್ಟಿರುವುದಿಲ್ಲ. ಚೆನ್ನ ಬಸಮ್ಮ ಇವರಿಗೆ ನನ್ನ ಅಜ್ಜ ವಿರೂಪಾಕ್ಷಪ್ಪ ಒಬ್ಬರೆ ಮಗ ಎಂದರೆ ಸರಿ. ಸದರಿ ವಿರೂಪಾಕ್ಷಪ್ಪ ಇವರಿಗೆ ಬಸವರಾಜ, ಪ್ರಭಾಕರ ಮತ್ತು ಬಸಪ್ಪ 3 ಜನ ಗಂಡು ಮಕ್ಕಳು ಮತ್ತು ಲಲಿತಮ್ಮ ಹಾಗೂ ಸುಲೋಚಮ್ಮ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಇವರಲ್ಲಿ ನನ್ನ ತಂದೆ ಬಸವರಾಜಪ್ಪ ಮತ್ತು ಅವರ ಸಹೋದರಿ ಸುಲೋಚಮ್ಮ ಮರಣ ಹೊಂದಿದ್ದಾರೆ. ನಮ್ಮ ತಂದೆ ಬಸವರಾಜ ಇವರಿಗೆ ನಾನು, ನನ್ನ ಅಕ್ಕ ಬುಡ್ಡಮ್ಮ, ಅಣ್ಣ ನಾಗರಾಜ 3 ಜನ ಮಕ್ಕಳು. ನನ್ನ ಚಿಕ್ಕಪ್ಪ ಪ್ರಭಾಕರ ಇವರಿಗೆ ಮಕ್ಕಳು ಇಲ್ಲ ನನ್ನ ಅಣ್ಣ ನಾಗರಾಜ ದತ್ತಕ್ಕೆ ಹೋಗಿರುತ್ತಾರೆ. ಬಸಪ್ಪ ಇವರಿಗೆ ಹೆಂಡತಿ ಮಕ್ಕಳು ಇರುತ್ತಾರೆ.

2. ಸನ್ 1970-71 ರಲ್ಲಿ ದಾವಾ ಭೂಮಿಯ ಬಗ್ಗೆ ಏನು ವ್ಯವಹಾರ ನಡೆದಿದೆ ಅನ್ನುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಸನ್ 1968 ರಲ್ಲಿ ಕಂದಾಯ ಇಲಾಖೆ ಯಿಂದ ಪಹಣಿಗಳು ಮೊದಲನೇ ಬಾರಿಗೆ ಜಾರಿಗೆ ಬಂದಿರುತ್ತವೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಭೂಮಿಯ ಮಾಲಿಕರು ಅಂತಾ ತೋರಿಸಲು ಡೈಗ್ಲಾಟು ಮತ್ತು ಇನ್ನಿತರೆ ದಾಖಲಾತಿಗಳು ಇದ್ದವು. ಸನ್ 1968 ರಿಂದ 1975 ರವರೆಗೆ ಸದರಿ ಪಹಣಿ ದಾಖಲೆಗಳ ಕುರಿತು ಪ್ರಕ್ರಿಯೆಗಳು ನಡೆದಿರುತ್ತವೆ ಎಂದರೆ ಇರಬಹುದು. 1968 ರಿಂದ ಇಲ್ಲಿಯವರೆಗೂ ಬಹಳಷ್ಟು ಜಮೀನುಗಳ ಕುರಿತು ನೋಂದಾಯಿತ ದಾಖಲೆಗಳ ಪ್ರಕಾರ ಪಹಣಿಗಳಲ್ಲಿ ದಾಖಲಾಗುವ ಕುರಿತು ಪ್ರಕ್ರಿಯೆಗಳು ನಡೆಯುತ್ತಾ ಬಂದಿರುತ್ತವೆ ಎಂದರೆ ಸುಳ್ಳು. ಸನ್ 1970-71 ನೇ ಸಾಲಿನಲ್ಲಿ

ಪಹಣಿಗಳು ಅಪ್ ಟು ಡೇಟ್ ಆಗಿಲ್ಲ ಎಂದರೆ ಸರಿಯಲ್ಲ. ಸನ್ 1970-71 ರಲ್ಲಿ ಜಮೀನುಗಳ ನೋಂದಣಿ ದಾಖಲೆ ಆಗುವ ಕುರಿತು ಪಹಣಿಗಳನ್ನು ನೋಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಚೆನ್ನ ಬಸಮ್ಮ ಇವರ ಒಬ್ಬನೇ ಮಗ ವಿರೂಪಾಕ್ಷಪ್ಪ ಇವರಿಗೆ ಮೇಲೆ ಹೇಳಿದ 13.44 ಎಕರೆ ಜಮೀನಿನಲ್ಲಿ 4 ಎಕರೆ ಜಮೀನನ್ನು ಮಾರಾಟ ಮಾಡುವ ಅಧಿಕಾರ ಇತ್ತು ಎಂದರೆ ಸರಿಯಲ್ಲ. ಸನ್ 1970 ರಲ್ಲಿ ಮೇಲ್ಕಂಡ ಜಮೀನನ್ನು ವಿರೂಪಾಕ್ಷಪ್ಪ ಇವರು ಸಾಗು ಮಾಡುತ್ತಿದ್ದರು ಎಂದರೆ ಸರಿ. ಅವರ ಸ್ವಾಧೀನವನ್ನು ನೋಡಿಕೊಂಡು ದಾವಾ ಜಮೀನನ್ನು ವಾಮದೇವಪ್ಪ ಇವರು ಸನ್ 1970 ರಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಅದ 1 ವರ್ಷದ ಅವದಿಯೊಳಗೆ ಸದರಿ ಜಮೀನನ್ನು ವಾದಿಯು ವಾಮದೇವಪ್ಪ ಇವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿಂದ ಇಲ್ಲಿಯವರೆಗೂ ವಾದಿಯೆ ದಾವಾ ಜಮೀನಿನ ಸ್ವಾಧೀನದಲ್ಲಿರುತ್ತಾನೆ ಎಂದರೆ ಸರಿಯಲ್ಲ. ವಾದಿಯು ದಾವಾ ಜಮೀನಿನ ಪ್ರಾಮಾಣಿಕ ಖರೀದಿದಾರ ಎಂದರೆ ಸರಿಯಲ್ಲ. ಚೆನ್ನಬಸಮ್ಮ ಇವರು ಬಹಳ ವರ್ಷದ ಹಿಂದೆಯೆತೀರಿಕೊಂಡಿದ್ದರೂ ಸಹ ಮೇಲೆ ಹೇಳಿದ ಜಮೀನಿನ ಪಹಣಿ ಸನ್ 1993 ರವರೆಗೂ ಚೆನ್ನಬಸಮ್ಮ ಇವರ ಹೆಸರಿನಲ್ಲಿ ದಾಖಲಿತ್ತು ಎಂದರೆ ಸರಿ. ಚೆನ್ನ ಬಸಮ್ಮ ಇವರಿಂದ ನೇರವಾಗಿ ಅವರ ಮೊಮ್ಮಗ ಪ್ರಭಾಕರ ಇವರ ಹೆಸರಿಗೆ ದಾವಾ ಸರ್ವೆ ನಂ. ನ ಹಕ್ಕು ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಚೆನ್ನಬಸಮ್ಮ ಇವರ ಮಗ ವಿರೂಪಾಕ್ಷಪ್ಪ ಇವರ 5 ಮಕ್ಕಳ ಪೈಕಿ ಪ್ರಭಾಕರ ಇವರ ಹೆಸರಿಗೆ ಮಾತ್ರ ಸದರಿ ಜಮೀನಿನ ಹಕ್ಕು ಬದಲಾವಣೆ ಆಯಿತು ಎಂದರೆ ಸರಿ. ಒಟ್ಟು 13.44 ಎಕರೆ ಜಮೀನು ಪ್ರಭಾಕರ ಇವರ ಹೆಸರಿಗೆ ದಾಖಲಾದರೂ ಸಹ ಒಟ್ಟು ಕುಟುಂಬದ ನಾತೆಯಿಂದ ನನಗೂ ಸಹ ಅದರಲ್ಲಿ ಹಕ್ಕು ಇತ್ತು. ಎಲ್ಲಾ ಕುಟುಂಬದ ಸದಸ್ಯರ ಒಪ್ಪಿಗೆಯ ಆದಾರದ ಮೇಲೆ ಪ್ರಭಾಕರ ಇವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ಸದರಿ ಒಪ್ಪಿಗೆಯ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುತ್ತ ಎಂದರೆ ಸಾಕ್ಷಿಯು ನೋಡಬೇಕು ಎನ್ನುತ್ತಾರೆ. ಸನ್ 2013 ರಲ್ಲಿ ದಾವಾ ಸರ್ವೆ ನಂ 488/ಇ 13.44 ಎಕರೆ ಜಮೀನು ಪ್ರಭಾಕರ ಇವರಿಂದ ನನ್ನ ಹೆಸರಿಗೆ ನೇರವಾಗಿ ಹಕ್ಕುಬದಲಾವಣೆ ಆಗಿದೆ ಎಂದರೆ ಸರಿ. ಒಪ್ಪಿಗೆ ಆದಾರದ ಮೇಲೆ ನನ್ನ ಹೆಸರಿಗೆ ದಾಖಲಾಗಿದೆ. ಆ ಒಪ್ಪಿಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ರೀತಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅದನ್ನು ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ.

3. ಪ್ರಸ್ತುತ ಸದರಿ 13.44 ಎಕರೆ ಜಮೀನಿನ ಪಹಣಿಯಲ್ಲಿ ನನ್ನ ತಾಯಿ ಸುಶೀಲಮ್ಮ ಇವರ ಹೆಸರಿಗೆ 3.14 ಎಕರೆ ಜಮೀನು ದಾಖಲಿದೆ, ನಾಗರಾಜ ಇವರ ಹೆಸರಿಗೆ 3.15 ಎಕರೆ ಜಮೀನು ದಾಖಲಿದೆ, ಬಸಪ್ಪ ಇವರ ಹೆಸರಿಗೆ 3.15 ಎಕರೆ ಜಮೀನು ದಾಖಲಿದೆ ಹಾಗೂ 4.ಎಕರೆ

ಜಮೀನು ನನ್ನ ಹೆಸರಿಗೆ ದಾಖಲಿದೆ. ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ನಾವು ಮೇಲೆ ಹೇಳಿದ ರೀತಿಯಲ್ಲಿ ಪಹಣಿಯಲ್ಲಿ ನಮ್ಮ ಹೆಸರುಗಳನ್ನು ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸರ್ವೆ ನಂ 488 ಇಯ ನಕಾಶೆಯ ದೃಡೀಕೃತ ನಕಲು, ನಮೂನೆ ನಂ 10 ರ ನಕಲು ಮತ್ತು ಆಕಾರ ಬಂದಿನ ದೃಡೀಕೃತ ನಕಲನ್ನು ತೋರಿಸಿ ಇದು ದಾವಾ ಸರ್ವೆ.ನಂ ಗೆ ಸೇರಿದ ದಾಖಲೆಗಳಾಗಿದ್ದು ಇದನ್ನು ನೀವೆ ಅರ್ಜಿ ಕೊಟ್ಟು ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ 18, 19 ಮತ್ತು 20 ಎಂದು ಗುರುತಿಸಲಾಯಿತು. ವಿಭಜನೆ ಮಾಡಿಕೊಳ್ಳುವ ಸಮಯದಲ್ಲಿ ನಾವು 4 ಜನ ಸೇರಿ ಒಂದು ಪಾಲು ಪಟ್ಟಿಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲು ಪಟ್ಟಿಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಿರುತ್ತಿರ ಎಂದರೆ ನನಗೆ ಗೊತ್ತಿಲ್ಲ ನಾನು ನೋಡಿ ಹೇಳುತ್ತೇನೆ ಎನ್ನುತ್ತಾರೆ. ಒಂದು ವೇಳೆ ಪಾಲು ಪಟ್ಟಿಯನ್ನು ಈ ವರೆಗೂ ನ್ಯಾಯಾಲಯಕ್ಕೆ ಹಾಜರುಪಡಿಸಲಿಲ್ಲ ಎಂದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಮುಂದಿನ ನ್ಯಾಯಾಲಯದ ಮುದ್ದತಿಗೆ ಆ ದಾಖಲಾತಿಯನ್ನು ಹಾಜರುಪಡಿಸುತ್ತೇನೆ. ಸದರಿ ಪಾಲು ಪಟ್ಟಿಯು ಕಾನೂನು ಬಾಹಿರ ಪಟ್ಟಿ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು, ಖಾತಾ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ವಿರೂಪಾಕ್ಷಪ್ಪನ ಮಕ್ಕಳು ದಾವಾ ಆಸ್ತಿಯನ್ನು ನಮ್ಮ ತಂದೆಯವರು ಮಾರಾಟಮಾಡಿದ್ದಾರೆ ಅಂತಾ ಹೇಳಿದ್ದರೂ ಸಹ ನಾವು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸುಳ್ಳು. ವಿರೂಪಾಕ್ಷಪ್ಪ ಮತ್ತು ಅವರ ಮಕ್ಕಳು ಯಾವತ್ತು ದಾವಾ ಆಸ್ತಿಯ ವಾದಿಯ ಮಾಲಿಕತ್ವವನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸುಳ್ಳು. ದಾವಾ ಆಸ್ತಿಯನು ಹೊರತುಪಡಿಸಿ ಉಳಿದ ವಿಸ್ತೀರ್ಣದ ಬಗ್ಗೆ ವಿರೂಪಾಕ್ಷಪ್ಪ ಇವರ 3 ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ದಾವಾ ಆಸ್ತಿಯನ್ನು ವಾದಿಯಿಂದ ಕಬಳಿಸುವ ಸಲುವಾಗಿ ನನ್ನ ಹೆಸರಿಗೆ ದಾಖಲು ಪಡಿಸಿಕೊಂಡಿರುತ್ತೇನೆ ಎಂದರೆ ಸುಳ್ಳು. ನನ್ನ ತಂದೆಗೆ 3.16 ಎಕರೆ ಜಮೀನು ಬಂದಿದೆ ಆದ್ದರಿಂದ ದಾವಾ ಜಮೀನಿನಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 10.02.2016 ರಂದು ನಾನು ವಾದಿಯ ಬಳಿ ಹೋಗಿ ದಾವಾ ಜಮೀನಿನ ಪಹಣಿ ನನ್ನ ಹೆಸರಿಗಿದೆ ನೀನು ಭೂಮಿಯನ್ನು ಇನ್ನುಮುಂದೆ ಮಾಡಬೇಡ ಅಂತಾ ವಾದಿಗೆ ತೊಂದರೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 13.02.2016 ರಂದು ನಾನು ವಾದಿಗೆ ದಾವಾ ಜಮೀನಿಂದ ಹೊರಗೆ ಹಾಕುತ್ತೇನೆ ಅಂತಾ ಹೆದರಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ವಾದಿಯು ನನ್ನ ಮೇಲೆ ಈ ದಾವೆಯನ್ನು ದಾಖಲಿಸಿದ್ದಾನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ವಾದಿಯ ಪರ ಮದ್ಯಂತರ ತಡೆಯಾಜ್ಞೆ ಆದೇಶ ಆಗಿದೆ ಎಂದರೆ

ನನಗೆ ಗೊತ್ತಿಲ್ಲ. ಮಾನ್ಯ ನ್ಯಾಯಾಲಯವು ವಾದಿಯ ದಾವಾ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ ಪಡಿಸದಂತೆ ಮತ್ತು ದಾವಾ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡದಂತೆ ಹಾಗೂ ವಾದಿಯನ್ನು ದಾವಾ ಆಸ್ತಿಯಿಂದ ಹೊರ ಹಾಕದಂತೆ ನನ್ನ ವಿರುದ್ದ ತಡೆಯಾಜ್ಞೆ ನೀಡಿದೆ ಎಂದರೆ ಸುಳ್ಳು. ವಾದಿಗೆ ಹಾನಿ ಮಾಡಬೇಕು ಅನ್ನುವ ಉದ್ದೇಶದಿಂದ ನಾನು ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸುಳ್ಳು. ನನ್ನ ಅಜ್ಜ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವನ್ನು ಮುಚ್ಚಿಟ್ಟು ನಾನು ಬ್ಯಾಂಕಿನಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸುಳ್ಳು. ನನ್ನ ಅಜ್ಜ ದಾವಾ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ಅವನ ವಾರಸುದಾರರರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 4.ಎಕರೆ ಜಮೀನನ್ನು ಮಾರಾಟ ಮಾಡುವ ಅಧಿಕಾರ ವಿರುಪಾಕ್ಷಪ್ಪ ಇವರಿಗೆ ಇತ್ತು ಎಂದರೆ ಸರಿಯಲ್ಲ. ವಾಮದೇವಪ್ಪ ಮತ್ತು ವಾದಿಯ ಖರೀದಿ ಪತ್ರಗಳ ಬಗ್ಗೆ ನನಗೆ ಸನ್ 2016 ರಲ್ಲಿ ನ್ಯಾಯಾಲಯದಿಂದ ಸಮನ್ಸ ಬಂದಮೇಲೆ ತಿಳಿದಿರುತ್ತದೆ. ಸದರಿ ಖರೀದಿ ಪತ್ರಗಳನ್ನು ರಹಿತ ಪಡಿಸಲು ನಾನು ಈವರಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ನೋಂದಾಯಿತ ಖರೀದಿ ಪತ್ರಗಳು ರದ್ದು ಆಗುವ ವರೆಗೂ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಹದ್ದುಬಸ್ತು ನಕಾಶೆಯನ್ನು ತೋರಿಸಿ ಇದು ನೀವೇ ಹಾಜರು ಪಡಿಸಿದ ದಾಖಲೆ ಎಂದರೆ ಸಾಕ್ಷಿಯು ಈಗೆ 10 ವರ್ಷದ ಹಿಂದೆ ದಾಖಲಿಯನ್ನು ಹಾಜರುಪಡಿಸಿದ್ದು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿ 28.11. 2012 ರಲ್ಲಿ ನಾನು ಭೂಮಿಯನ್ನು ಸರ್ವೆ ಮಾಡಿಸಿದಾಗ 4 ಎಕರೆ ಜಮೀನು ವಾದಿಯ ಸ್ವಾದೀನದಲ್ಲಿ ಇರುತ್ತದೆ ಎಂದು ಹದ್ದು ಬಸ್ತು ನಕಾಶೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿ ನಕಾಶೆಯನ್ನು ಹಿಂದಕ್ಕೆ ಪಡೆಯಲು ನಾನು ಇದೇ ನ್ಯಾಯಾಲಯದಲ್ಲಿ ಮದ್ಯಂತರ ಅರ್ಜಿ ನಂ 9 ಅನ್ನು ಸಲ್ಲಿಸಿದ್ದೇನೆ ಎಂದರೆ ಸುಳ್ಳು. ಸಾಕ್ಷಿಗೆ ಮದ್ಯಂತರ ಅರ್ಜಿ ನಂ 9 ರ ಜೊತೆ ಇರುವ ಪ್ರಮಾಣಪತ್ರದಲ್ಲಿ ಡಿಪೋನೆಂಟ ಅಂತಾ ಇರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನಿಜ ಇದೆಯಾ ಅಥವಾ ಸುಳ್ಳು ಎಂದರೆ ನಿಜ ಇರುತ್ತದೆ ಆದರೆ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ಸದರಿ ನಕಾಶೆಯಲ್ಲಿ ವಾದಿಯು ದಾವಾ ಆಸ್ತಿಯ ಸ್ವಾದೀನದಲ್ಲಿರುತ್ತಾನೆ ಅಂತಾ ನಮೂದು ಇರುವುದರಿಂದ ಸದರಿ ದಾಖಲೆಯನ್ನು ಹಿಂದಕ್ಕೆ ಪಡೆಯಲು ನಾನು ಪ್ರಯತ್ನಪಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರದಂತೆ ವಾದಿಯ ಹೆಸರಿನಲ್ಲಿ ಪಹಣಿ ದಾಖಲಾಗಿಲ್ಲ ಅನ್ನುವುದರ ದುರುಪಯೋಗ ಪಡಿಸಿಕೊಂಡು ನಾನು ಸುಳ್ಳು ತಕರಾರು

ಸಲ್ಲಿಸಿರುತ್ತೇನೆ ಎಂದರೇ ಸುಳ್ಳು. ದಾವಾ ಆಸ್ತಿಯನ್ನು ಮಾರಾಟ ಮಾಡುವ ಅಧಿಕಾರ ನಮ್ಮ ಅಜ್ಜನಿಗೆ ಇತ್ತು ದಾವಾ ಆಸ್ತಿಗೆ ಮಾಲೀಕ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ